# ನೂತನ ಎಐ ಸಿನಿಮಾ



■ ಸುಮಲತಾ ಎನ್.

ಹದಿನೆಂಟು ವರ್ಷಗಳಿಂದ ಸಿನಿಮಾರಂಗದಲ್ಲಿ ತೊಡಗಿಕೊಂಡಿರುವ ನೂತನ್, ಬೆಂಗಳೂರಿನವರು. ಓದಿದ್ದು ಎಲ್‌ಎಲ್‌ಬಿ ಆದರೂ ಸಿನಿಮಾಗಳೆಡೆಗಿನ ಸೆಳೆತ ಅವರನ್ನು ಚಿತ್ರರಂಗಕ್ಕೆ ಕರೆತಂದಿತು. ಸಹಾಯಕ ನಿರ್ದೇಶಕನಾಗಿ, ಸಿಜಿ, ವಿಎಫ್‌ಎಕ್ಸ್... ಹೀಗೆ ತಾಂತ್ರಿಕರಂಗದಲ್ಲಿ ಕೆಲಸ ಮಾಡುತ್ತಿದ್ದ ಅವರಲ್ಲಿ ಭಿನ್ನ ಧಾಟಿಯಲ್ಲಿ ಸಿನಿಮಾವೊಂದನ್ನು ರೂಪಿಸಬೇಕೆಂಬ ಆಲೋಚನೆ ಹುಟ್ಟಿಕೊಂಡಿದ್ದು 'ಎಐ' ತಂತ್ರಜ್ಞಾನ ಕಾಲಿಟ್ಟ ನಂತರ.

'ಎಐ' ಪರಿಚಯಗೊಂಡು, ತಂತ್ರಜ್ಞಾನದಲ್ಲೇ ಹೊಸ ಹೊಸ ಪರಿಕಲ್ಪನೆಗಳು ಹುಟ್ಟಿಕೊಳ್ಳುತ್ತಿದ್ದ ಆ ಸಂದರ್ಭದಲ್ಲೇ ಸಿನಿಮಾವನ್ನು ಎಐನಲ್ಲಿಯೇ ಕಟ್ಟುವ ಯೋಚನೆ ಮಾಡಿದವರು ನೂತನ್.

ಎಐ ಬಳಸಿ ಅನಿಮೇಷನ್‌ಗಳು ರೂಪಿತವಾಗಿದ್ದವು. ಆದರೆ ಪೂರ್ಣ ಪ್ರಮಾಣದ ಸಿನಿಮಾ ಮಾಡಿದ ಉದಾಹರಣೆಗಳು ದೊರೆಯಲಿಲ್ಲ. ಹೀಗಾಗಿ ಒಂದು ಫೀಚರ್ ಸಿನಿಮಾವನ್ನು, ಅದೂ ಚಿತ್ರಮಂದಿರದಲ್ಲಿ ಬಿಡುಗಡೆಯಾಗುವಂಥ ಸಿನಿಮಾವನ್ನು ಎಐ ಬಳಸಿ ರೂಪಿಸಬೇಕೆಂದು ನಿರ್ಧರಿಸಿದರು. ಸುಮಾರು ಆರು ತಿಂಗಳ ಕಾಲ ಈ ಪ್ರಯೋಗದಲ್ಲಿ ತೊಡಗಿಕೊಂಡು ಕನ್ನಡದಲ್ಲಿ 'ಲವ್ ಯು' ಎಂಬ ಸಿನಿಮಾವನ್ನು ಈಚೆಗೆ ಬಿಡುಗಡೆಗೊಳಿಸಿದ್ದಾರೆ.

ರೊಮ್ಯಾಂಟಿಕ್ ಮ್ಯೂಸಿಕಲ್ ಡ್ರಾಮಾ ಸಿನಿಮಾ ಇದಾಗಿದ್ದು, ಸಿನಿಮಾದ ಎಲ್ಲ ಅಂಶಗಳೂ ಎಐ ಬೆಂಬಲಿತವಾಗಿವೆ. ಹೀಗಾಗಿ 'ವಿಶ್ವದಲ್ಲೇ ಪೂರ್ಣಪ್ರಮಾಣದ ಮೊದಲ ಎಐ ಸಿನಿಮಾ' ಎಂಬ ಗರಿಮೆ ಕೂಡ ಈ ಸಿನಿಮಾದ್ದಾಗಲಿದೆ.

'ಸಾಂಪ್ರದಾಯಿಕ ಸಿನಿಮಾ ನಿರ್ಮಾಣಕ್ಕೆ ಎಐ ಮರುಜನ್ಮ ಕೊಡುತ್ತದೆನ್ನುವುದು ನನ್ನ ಅಭಿಪ್ರಾಯ' ಎಂದು ಹೇಳುವ ನೂತನ್, ಈ ಪ್ರಯತ್ನಕ್ಕೆ ಮುಂದಾಗಲು ತಮಗಿದ್ದ ಕಾರಣಗಳನ್ನು ಹಂಚಿಕೊಳ್ಳುತ್ತಾರೆ.

''ಮೊದಲನೆಯದಾಗಿ, ಕನ್ನಡದಲ್ಲಿ ಎಐ ಸಿನಿಮಾ ಮಾಡಿ ಚಿತ್ರಮಂದಿರದಲ್ಲಿ ಬಿಡುಗಡೆ ಮಾಡಿದರೆ ಅದೊಂದು ದಾಖಲೆಯಾಗುತ್ತದೆ. 'ವಿಶ್ವದಲ್ಲೇ ಪೂರ್ಣಪ್ರಮಾಣದ ಮೊದಲ ಎಐ ಫೀಚರ್ ಸಿನಿಮಾ' ಎಂಬ ಗರಿಮೆ ಕನ್ನಡ ಭಾಷೆಯಿಂದ ದಾಖಲಾಗಬೇಕು ಎನಿಸಿತು. ಎಷ್ಟೇ ವರ್ಷವಾದರೂ ದಾಖಲೆ ಉಳಿಯುತ್ತದೆ. ಎರಡನೆಯದಾಗಿ, ಆಗ ಸಿನಿಮಾ ಕಟ್ಟುವ ಪ್ರಕ್ರಿಯೆ ಕಷ್ಟ ಇದ್ದರೂ ಒಳ್ಳೆಯ ಸಿನಿಮಾ ಕೊಡುತ್ತಿದ್ದರು. ಎಷ್ಟೆಲ್ಲ ಮಿತಿಗಳಿದ್ದರೂ ಅತ್ಯುತ್ತಮ ಸಿನಿಮಾ ಕೊಡುತ್ತಿದ್ದರು. 2011ರಿಂದ ಡಿಜಿಟಲ್ ಬಂತು. ಸಿನಿಮಾ ಕಟ್ಟುವುದು ಸುಲಭವಾಯಿತು. ಇಷ್ಟು ಸೌಲಭ್ಯಗಳಿದ್ದರೂ ಸ್ಟಾರ್ ನಟರು 3–4 ವರ್ಷಕ್ಕೆ ಒಂದು ಸಿನಿಮಾ ಮಾಡುತ್ತಾರೆ. ಕನಿಷ್ಠ ಬಜೆಟ್ 50 ಕೋಟಿ ಇದೆ. ಇವೆಲ್ಲದರ ಹೊರತಾಗಿಯೂ ಥಿಯೇಟರ್‌ಗಳಿಗೆ ಜನ ಬರುತ್ತಿಲ್ಲ. ಮೂರನೆಯದಾಗಿ, ಕನ್ನಡ ಭಾಷಾಪ್ರೇಮ, ರಾಜ ಮಹಾರಾಜರುಗಳ ಕಥೆಗಳ ಬಗ್ಗೆ ಯಾರೂ ಈಗ ಸಿನಿಮಾ ಮಾಡುತ್ತಿಲ್ಲ. ತಮಿಳುನಾಡು, ಆಂಧ್ರ, ಕೇರಳ, ಮಹಾರಾಷ್ಟ್ರ, ಪ್ರತಿ ರಾಜ್ಯದಲ್ಲಿಯೂ ರಾಜ್ಯಾಭಿಮಾನ, ಭಾಷಾಭಿಮಾನದ ಸಿನಿಮಾಗಳಿವೆ. ಹಾಗೆ ಕನ್ನಡದಲ್ಲಿಯೂ ಕನ್ನಡ ಭಾಷೆ, ಇತಿಹಾಸ, ರಾಜರು, ಪರಂಪರೆಯನ್ನು ಬಿಂಬಿಸುವ ಸಿನಿಮಾಗಳನ್ನು ರೂಪಿಸಿ ಜನರಿಗೆ ದಾಟಿಸುವ ಹಂಬಲ. ಈ ಎಲ್ಲದಕ್ಕೂ ಒಂದು ಟೂಲ್ ಆಗಿ ಎಐ ಕಾಣಿಸುತ್ತಿದೆ'' ಎನ್ನುತ್ತಾರೆ ನೂತನ್.

ಒಂದು ಗಂಟೆ ಮೂವತ್ತೈದು ನಿಮಿಷಗಳ ಈ ಸಿನಿಮಾದಲ್ಲಿ ಮುಖ್ಯವಾಗಿ 15 ಪಾತ್ರಗಳನ್ನು ಸೃಷ್ಟಿಸಲಾಗಿದೆ. 12 ಹಾಡುಗಳು ಇವೆ. ಕಲಾವಿದರ ಸೃಷ್ಟಿಯೂ ಎಐನದ್ದೇ. ನರಸಿಂಹಮೂರ್ತಿಯವರು ಕಥೆ, ಚಿತ್ರಕಥೆ, ಸಂಭಾಷಣೆ ಬರೆದಿದ್ದಾರೆ.

'ಎಐನಲ್ಲಿ ಕೆಲಸ ಮಾಡಲು ತಾಳ್ಮೆ ಮುಖ್ಯ. ನಾನು ಸಿನಿಮಾ ಆರಂಭಿಸಿದ ಸಮಯದಲ್ಲಿ ಟೂಲ್‌ಗಳು ಕಡಿಮೆಯಿದ್ದವು. ಈ ಸಿನಿಮಾ ಎಲ್ಲ ರೀತಿಯಿಂದಲೂ ಟ್ರಯಲ್ ಅಷ್ಟೆ. ಇದರಲ್ಲಿ ಸಾಕಷ್ಟು ತಪ್ಪುಗಳಿವೆ. ಪ್ರೇಕ್ಷಕರು ಇದೊಂದು ಪ್ರಯತ್ನ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡೇ ತಪ್ಪುಗಳನ್ನು ವಿಶ್ಲೇಷಣೆ ಮಾಡಬಹುದು' ಎನ್ನುತ್ತಾರೆ.

ಬೆಂಗಳೂರು ನಿರ್ಮಾತೃ ಕೆಂಪೇಗೌಡ, ಇಮ್ಮಡಿ ಪುಲಿಕೇಶಿ ಸೇರಿದಂತೆ ಹಲವು ಪ್ರಸಿದ್ಧ ರಾಜರ, ಕನ್ನಡಪ್ರೇಮದ ಕಥೆಗಳ ಸಿನಿಮಾಗಳನ್ನೂ ರೂಪಿಸುತ್ತಿದ್ದಾರೆ.

'ತಂತ್ರಜ್ಞಾನ ಎಂದಿಗೂ ಕ್ರಿಯಾಶೀಲತೆಯನ್ನು ರಿಪ್ಲೇಸ್ ಮಾಡಲು ಸಾಧ್ಯವಿಲ್ಲ' ಎಂದು ಹೇಳುವ ಅವರು, 'ಎಐ ಸಿನಿಮಾ ಕೂಡ ಸ್ಕ್ರಿಪ್ಟ್ ಚೆನ್ನಾಗಿದ್ದರೇ ಗೆಲ್ಲುವುದು. ತಂತ್ರಜ್ಞಾನವನ್ನು ಬಳಸಿಕೊಳ್ಳುವಲ್ಲಿ ನಮ್ಮ ಕ್ರಿಯಾಶೀಲತೆಯೂ ಮುಖ್ಯ' ಎಂದು ಹೇಳುತ್ತಾರೆ. ■

> ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಬಳಸಿಕೊಂಡು ಪೂರ್ಣ ಪ್ರಮಾಣದ ಸಿನಿಮಾ ರೂಪಿಸಿರುವ ಪ್ರಯತ್ನವೊಂದು ಕನ್ನಡದಲ್ಲಿ ನಡೆದಿದೆ. ಸಿನಿಮಾ ಪ್ರೀತಿ, ತಂತ್ರಜ್ಞಾನದ ಆಸಕ್ತಿ ಎರಡನ್ನೂ ಒಟ್ಟಾಗಿಸಿ 'ಲವ್ ಯು' ಎಂಬ ಎಐ ಸಿನಿಮಾ ಕಟ್ಟಿರುವ ನೂತನ್, ಕನ್ನಡ ಪ್ರೀತಿಯನ್ನು ಬಿಂಬಿಸುವ ಮತ್ತಷ್ಟು ಸಿನಿಮಾಗಳನ್ನು ರೂಪಿಸುವ ಹಾದಿಯಲ್ಲಿದ್ದಾರೆ.